ಸಿಸಿ. ನಂಬರ್.731/2021
ಪಿ ಡಬ್ಲ್ಯು: 1

ದಿನಾಂಕ:02/12/2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ: ಶ್ರೀ. ಕೆಆರ್ ಕೆ., ವಕೀಲರಿಂದ:**

ನಾನು ಮೂಲತಃ ಕಾನೂರು-ಕಟ್ಟಿನಮನೆಯವರು. ನಾನು ಕೊಪ್ಪಕ್ಕೆ ಬಂದು ಸುಮಾರು 20 ರಿಂದ 22 ವರ್ಷಗಳಾಗಿರುತ್ತವೆ. ಈಗ ನಾನು ಅಡಿಕೆ ವ್ಯಾಪಾರವನ್ನು ಮಾಡುತ್ತಿದ್ದೇನೆ. ನಾನು ಕೊಪ್ಪಕ್ಕೆ ಬಂದಾಗಿನಿಂದ ಇದೇ ಅಡಿಕೆ ವ್ಯಾಪಾರವನ್ನು ಮಾಡಿಕೊಂಡಿರುತ್ತೇನೆ. ಸದರಿ ಅಡಿಕೆ ವ್ಯಾಪಾರಕ್ಕೆ ಟ್ರೇಡ್ ಲೈಸೆನ್ಸ್ ಇದೆಯೇ ಎಂದರೆ ಪಂಚಾಯಿತಿಯಿಂದ ಲೈಸೆನ್ಸನ್ನು ಪಡೆದುಕೊಂಡಿರುತ್ತೇನೆ. ಅಗ್ರಿಕಲ್ಚರಲ್ ಪ್ರಾಡಕ್ಟ್ ಆಗಿದ್ದರಿಂದ ನಾನು ಎಪಿಎಂಸಿ ಯಿಂದ ಲೈಸೆನ್ಸನ್ನು ಪಡೆದುಕೊಂಡಿರುತ್ತೇನೆಯೇ ಎಂದರೆ ಇಲ್ಲ.

ಸದರಿ ವ್ಯಾಪಾರಕ್ಕೆ ನಾನು ಬಿಲ್ಲುಗಳನ್ನು ಏನಾದರೂ ಕೊಡುತ್ತೇನೆಯೇ ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ನಾನು ಚಿಲ್ಲರೆ ವ್ಯಾಪಾರ ಮಾಡಿಕೊಂಡಿದ್ದರಿಂದ ಬಿಲ್ಲುಗಳನ್ನು ನೀಡುವುದಿಲ್ಲ. ಅದೇ ರೀತಿ ಯಾವುದೇ ಜಿಎಸ್ ಟಿ ಬಿಲ್ಲುಗಳನ್ನೂ ಸಹಾ ನೀಡುವುದಿಲ್ಲ. ಟ್ರೇಡ್ ಲೈಸೆನ್ಸ್ ಅನ್ನು ಪಡೆದುಕೊಂಡು ಜಿ ಎಸ್ ಟಿ ಮೂಲಕ ನಾನು ಯಾವುದೇ ವ್ಯವಹಾರಗಳನ್ನು ಮಾಡಿಕೊಂಡಿರುವುದಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಅಡಿಕೆ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಾನು ಐಟಿ ರಿಟರ್ನ್ಸ್ ಅನ್ನು ಸಲ್ಲಿಸಿರುತ್ತೇನೆ. ವಾರ್ಷಿಕವಾಗಿ ಸದರಿ ವ್ಯಾಪಾರದಿಂದ ನನಗೆ 5-6 ಲಕ್ಷ ರೂಪಾಯಿಗಳ ವರಮಾನ ಬರುತ್ತದೆ. ಈ ಪ್ರಕರಣದಲ್ಲಿ ನಮೂದಿಸಿರುವ ರೂ.4,00,000/-ಗಳನ್ನು ನಾನು ಸಾಲವಾಗಿ ಆರೋಪಿಯವರಿಗೆ ನೀಡಿರುವ ಬಗ್ಗೆ ನನ್ನ ಐಟಿ ರಿಟರ್ನ್ಸ್ ನಲ್ಲಿ

ನಮೂದಿಸಿರುತ್ತೇನೆಯೇ ಎಂದರೆನನಗೆ ಗೊತ್ತಿಲ್ಲ ಹಾಗೂ ನೆನಪಿಲ್ಲ. ನಾನು 22 ವರ್ಷಗಳ ಹಿಂದೆ ಕೊಪ್ಪಕ್ಕೆ ಬಂದಾಗ ಬಾಡಿಗೆ ಅಥವಾ ಸ್ವಂತ ಮನೆಯಲ್ಲಿ ವಾಸವಿದ್ದೆ ಎಂದರೆ ಬಾಡಿಗೆ ಮನೆಯಲ್ಲಿ ವಾಸವಿದ್ದೆ. ಈಗ ನಾನು ಸುಮಾರು 12 ವರ್ಷಗಳಿಂದ ನನ್ನ ಸ್ವಂತ ಮನೆಯಲ್ಲಿ ವಾಸವಿದ್ದೇನೆ.

ನಾನು ಇದೇ ನ್ಯಾಯಾಲಯದಲ್ಲಿ ಎಷ್ಟು ಚೆಕ್ ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಕೆಲವು ಪ್ರಕರಣಗಳನ್ನು ದಾಖಲಿಸಿಕೊಂಡಿರುತ್ತೇನೆ, ಅವುಗಳಲ್ಲಿ ಕೆಲವು ರಾಜಿಯಾಗಿರುತ್ತವೆ. ಈ ರೀತಿ ಚೆಕ್ ಪ್ರಕರಣಗಳನ್ನು ನಾನು ಸುಮಾರು 10 ವರ್ಷಗಳಿಂದ ದಾಖಲಿಸಿರುತ್ತೇನೆ, ಕೆಲವು ಪ್ರಕರಣಗಳು ಇನ್ನೂ ಇತ್ಯರ್ಥಕ್ಕೆ ಬಾಕಿ ಇರುತ್ತವೆ. ನನ್ನ ಯಾವುದಾದರೂ ಫೈನಾನ್ಸ್ ಇದೆಯೇ ಎಂದರೆ ಇಲ್ಲ. ಈ ರೀತಿ ನಾನು ಚೆಕ್ಕುಗಳನ್ನು ಪಡೆದುಕೊಂಡು ಸಾಲವನ್ನು ನೀಡುತ್ತಿರುವ ಬಗ್ಗೆ ಏನಾದರೂ ಅನುಮತಿಯನ್ನು ಪಡೆದುಕೊಂಡಿರುತ್ತೇನೆಯೇ ಎಂದರೆ ನಾನು ಸಾಲವನ್ನು ಕೊಟ್ಟ ನಂತರ ಅವರೇ ನನಗೆ ಚೆಕ್ಕುಗಳನ್ನು ನೀಡಿರುತ್ತಾರೆ. ಈ ರೀತಿ ವ್ಯವಹಾರಗಳನ್ನು ಮಾಡಿಕೊಳ್ಳಲು ಯಾವುದೇ ಅನುಮತಿ ಅಥವಾ ಲೇವಾದೇವಿಗಾಗಿ ಪರವಾನಿಗೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ದಾಖಲಿಸಿರುವ ಚೆಕ್ ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳು ಮುಕ್ತಾಯವಾಗಿರುತ್ತವೆ ಎಂಬ ಬಗ್ಗೆ ಹೇಳಬಹುದೇ ಎಂದರೆ ಇಲ್ಲ, ಅವುಗಳಲ್ಲಿ ಚೆಕ್ ಪ್ರಕರಣಗಳು ರಾಜಿಯಾಗಿರುತ್ತವೆ. ಚೆಕ್ ಪ್ರಕರಣಗಳಲ್ಲಿ ನಮೂದಿಸಿರುವ ಸಾಲದ ಅಮೌಂಟನ್ನು ನಾನು ನೀಡಿರುವ ಬಗ್ಗ ಐಟಿ ರಿಟರ್ನ್ ನಲ್ಲಿ ನಮೂದಿಸಿರುವುದಿಲ್ಲ. ನನ್ನ ವ್ಯಾಪಾರವನ್ನು ನಾನು ಕೆಲವು ಸಲ ಬ್ಯಾಂಕ್ ಮೂಲಕ ಹಾಗೂ ಕೆಲವು ಸಲ ಕೈಸಾಲ ಮೂಲಕ ಮಾಡಿಕೊಂಡಿರುತ್ತೇನೆ. ನಾನು ಈಗ ರಾಜಕೀಯದಲ್ಲಿ ಇದ್ದೇನೆ ಎಂದರೆ ನಾನು ಯಾವುದೇ ಪಕ್ಷದಲ್ಲಿ ಇರುವುದಿಲ್ಲ. ಈ ಹಿಂದೆ ಯಾವುದಾದರೂ ರಾಜಕೀಯ ಪಕ್ಷದಲ್ಲಿ ಗುರುತು ಮಾಡಿಕೊಂಡಿರುತ್ತೇನೇಯೇ ಎಂದರೆ ಆ ರೀತಿ ಯಾವುದೂ ಮಾಡಿರುವುದಿಲ್ಲ, ಸಂಘಟನೆಗಳ ಹೋರಾಟಗಳಲ್ಲಿ

ಭಾಗವಹಿಸಿರುತ್ತೇನೆ. ಈ ರೀತಿ ಸಂಘಟನೆಗಳ ಹೋರಾಟಗಳಲ್ಲಿ ಭಾಗವಹಿಸಲು ಯಾವುದಾದರೂ ನನಗೆ ಲಾಭ ಇದೆಯೇ ಎಂದರೆ ನಾನು ಸಿದ್ಧಾಂತಗಳ ಮೇಲೆ ಹೋರಾಟವನ್ನು ಮಾಡಿರುತ್ತೇನೆ, ಅವುಗಳಲ್ಲಿ ಯಾವುದೇ ಸ್ವಾರ್ಥ ಅಥವಾ ಲಾಭ ಇರುವುದಿಲ್ಲ. ಈಗಲೂ ಸಹಾ ಸಂಘಟನೆಗಳ ಹೋರಾಟಗಳಲ್ಲಿ ನಾನು ಭಾಗವಹಿಸುತ್ತೇನೆಯೇ ಎಂದರೆ ಸ್ವಲ್ಪ ಕಡಿಮೆ ಮಾಡಿರುತ್ತೇನೆ. ಸಂಘಟನೆಗಳ ಹೋರಾಟಗಳಲ್ಲಿ ಭಾಗವಹಿಸಬೇಕಾದರೆ ಅವುಗಳಲ್ಲಿರುವ ಸಿದ್ಧಾಂತದಲ್ಲಿ ಸಾಮಾನ್ಯ ಜ್ಞಾನ ಹಾಗೂ ಮಾಹಿತಿ ಇರಬೇಕು ಎಂದರೆ ಸರಿ.

ಈ ಪ್ರಕರಣದ ಆರೋಪಿ 2 -3 ಸಲ ನನ್ನ ಕಾರಿನ ಡ್ರೈವರ್ ಆಗಿ ಬಂದಿದ್ದರಿಂದ ನನಗೆ ಪರಿಚಯವಾಗಿರುತ್ತಾರೆ. ಸದರಿಯವರು ನನಗೆ 2-3 ವರ್ಷಗಳಿಂದ ಪರಿಚಯ ಇರುತ್ತಾರೆ ಎಂದರೆ ಸುಮಾರು 10 ರಿಂದಂ 15 ವರ್ಷಗಳಿಂದ ಪರಿಚಯ ಇರುತ್ತಾರೆ. ಆರೋಪಿಯವರು ನನಗೆ ತುಂಬಾ ಪರಿಚಯಸ್ಥರು ಆಗಿರುತ್ತಾರೆ ಎಂದರೆ ತುಂಬಾ ಅಲ್ಲ, ಪರಿಚಯಸ್ಥರು ಆಗಿರುತ್ತಾರೆ. ಅರೋಪಿಯವರು ಏನು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆರೋಪಿಯವರ ಮನೆಯಲ್ಲಿ ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯವರು ನನಗೆ ಪರಿಚಯ ಇದ್ದ ಸಮಯದಲ್ಲಿ ಏನು ಕೆಲಸವನ್ನು ಮಾಡುತ್ತಿದ್ದರು ಎಂದರೆ ಡ್ರೈವಿಂಗ್ ಕೆಲಸ ಮಾಡುತ್ತಿದ್ದರು. ಈ ಪ್ರಕರಣವನ್ನು ದಾಖಲು ಮಾಡುವ ಸಮಯದಲ್ಲಿ ಎಲ್ಲಾ ಮಾಹಿತಿಯನ್ನು ನಮ್ಮ ವಕೀಲರಿಗೆ ನಾನು ನೀಡಿರುತ್ತೇನೆಯೇ ಎಂದರೆ ಕೆಲವು ಮಾಹಿತಿಗಳನ್ನು ಹೇಳಿರುವುದಿಲ್ಲ. ಈ ಪ್ರಕರಣವನ್ನು ದಾಖಲು ಮಾಡುವ ಸಮಯದಲ್ಲಿ ಎಲ್ಲಾ ವಿಚಾರಗಳೂ ನನಗೆ ನಮ್ಮ ವಕೀಲರು ತಿಳಿಸಿರುತ್ತಾರೆ. ಆರೋಪಿಯವರು ಎಲ್ಲಿ ವಾಸವಿದ್ದಾರೆ ಎಂದರೆ ಗಂಗನಸರಳು ಎಂಬಲ್ಲಿ ವಾಸವಿದ್ದಾರೆ. ನಾನು ಸುಮಾರು 2 ಸಲ ಅಲ್ಲಿಗೆ ಕೇಳಲು ಹೋಗಿರುತ್ತೇನೆ. ಈ ರೀತಿ ಸುಮಾರು 5 ವರ್ಷಗಳ ಹಿಂದೆ ಅಲ್ಲಿಗೆ ಹೋಗಿರುತ್ತೇನೆ. ಆರೋಪಿಯವರ ಜೊತೆಯಲ್ಲಿ ಈ ವ್ಯವಹಾರವನ್ನು ಬಿಟ್ಟು ಬೇರೆ

ಯಾವುದೇ ವ್ಯವಹಾರವನ್ನು ನಾನು ಮಾಡಿರುವುದಿಲ್ಲ. ನಾನು ಆರೋಪಿಯವರಿಗೆ ನೀಡಿದ ಹಣಕ್ಕೆ ಯಾವುದೇ ಆಧಾರ ಇಲ್ಲ. ಆ ರೀತಿ ಹಣವನ್ನು ಕೊಟ್ಟಿದ್ದಕ್ಕೆ ನಾನು ಯಾವುದೇ ಬಡ್ಡಿಯನ್ನು ಹಾಕಿರುವುದಿಲ್ಲ.

ನನಗೆ ಬ್ಯಾಂಕ್ ವ್ಯವಹಾರಗಳ ಬಗ್ಗೆ ಜ್ಞಾನ ಇರುತ್ತದೆ ಎಂದರೆ ಸರಿ. ನಾನು ಹಲವಾರು ಚೆಕ್ ಪ್ರಕರಣಗಳನ್ನು ನ್ಯಾಯಾಲಯದ ಮುಂದೆ ದಾಖಲಿಸಿದ್ದರಿಂದ ಚೆಕ್ ಗಳ ಬಗ್ಗೆ ನನಗೆ ಸಾಕಷ್ಟು ಜ್ಞಾನ ಇದೆ ಎಂದರೆ ಸರಿ. ಆರ್ ಬಿ ಐ., ನಿಯಮಗಳ ಪ್ರಕಾರ ರೂ.50,000/-ಗಳಕ್ಕಿಂತ ಹೆಚ್ಚು ವ್ಯವಹಾರಗಳನ್ನು ಬ್ಯಾಂಕ್ ಮೂಲಕ ಮಾಡಬೇಕು ಎಂದರೆ ಸರಿ.

ಆರೋಪಿಯವರಿಗೆ ಹಣವನ್ನು ನಾನು ನನ್ನ ಮನೆಯಲ್ಲಿ ನೀಡಿರುತ್ತೇನೆ. ಆ ಸಮಯದಲ್ಲಿ ನಮ್ಮನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರೂ ಇರಲಿಲ್ಲ. ಸದರಿ ಹಣವನ್ನು ನನ್ನ ಸ್ವಂತ ಮನೆಯಲ್ಲಿ ಆರೋಪಿಯವರಿಗೆ ನೀಡಿರುತ್ತೇನೆ. ಯಾವ ದಿನಾಂಕದಲ್ಲಿ ಅದನ್ನು ನೀಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ, ಆದರೆ ಮಧ್ಯಾಹ್ನ ಹೊತ್ತಿನಲ್ಲಿ ಅವರಿಗೆ ನೀಡಿರುತ್ತೇನೆ. ಆರೋಪಿಯವರಿಗೆ ನಾನು ನಗದು ರೂಪದಲ್ಲಿ ಹಣವನ್ನು ನೀಡಿರುತ್ತೇನೆ. ಸದರಿ ಹಣ ರೂ.500/- ಗಳ ಮುಖಬೆಲೆಯ ನೋಟುಗಳಾಗಿದ್ದವು. ಆ ಸಮಯದಲ್ಲಿ ನಾನು ಅವರಿಂದ ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ, ಸದರಿ ಹಣವನ್ನು ಅವರು 3 ತಿಂಗಳುಗಳ ಒಳಗೆ ವಾಪಾಸು ನೀಡುತ್ತಾರೆ ಎಂದು ಹೇಳಿದ್ದರಿಂದ ವಿಶ್ವಾಸದ ಮೇಲೆ ಹಣವನ್ನು ಅವರಿಗೆ ನೀಡಿರುತ್ತೇನೆ.

ನನಗೆ ವಿಶ್ವನಾಥ್ ಹಾಗೂ ತಾಜಿಲ್ ಮುಬೀನ್ ಅವರು ಪರಿಚಯ ಇದ್ದಾರೆ ಎಂದರೆ ಇಲ್ಲ. ವಿಶ್ವನಾಥ್ ಹಾಗೂ ತಾಜಿಲ್ ಮುಬೀನ್ ಸಹಾ ನಮ್ಮ ಸಂಘಟನೆಗಳ

ಹೋರಾಟಗಳಲ್ಲಿ ಭಾಗವಹಿಸಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ತಾಜಿಲ್ ಮುಬೀನ್ ಹಾಗೂ ಈ ಪ್ರಕರಣದಲ್ಲಿರುವ ಆರೋಪಿ ಒಳ್ಳೆ ಗೆಳೆಯರು ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ತಾಜಿಲ್ ಮುಬೀನ್ ಅವರ ಮನೆಯ ಹಿಂದುಗಡೆ ನಮ್ಮ ಮನೆ ಬರುತ್ತದೆ ಎಂದರೆ ಆ ರೀತಿ ಮನೆ ಇರುವ ಬಗ್ಗೆ ನನಗೆ ಗೊತ್ತಿದೆ ಆದರೆ ಸದರಿ ಮನೆ ಯಾರದಾಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ತಾಜಿಲ್ ಮುಬೀನ್ ಹಾಗೂ ಆರೋಪಿಯವರ ವ್ಯವಹಾರದಲ್ಲಿ ತಾಜಿಲ್ ಮುಬೀನ್ ಅವರು ಆರೋಪಿಯಿಂದ ಚೆಕ್ಕನ್ನು ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ, ಅದು ಖಾಲಿ ಚೆಕ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ತಾಜಿಲ್ ಮುಬೀನ್ ಅವರ ಮನೆಗೆ ಹೋದಾಗ ಅವರ ಮನೆಯಲ್ಲಿದ್ದ ಚೆಕ್ಕನ್ನು ತೆಗೆದುಕೊಂಡು ಈ ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯವರಿಗೆ ನೋಟಿಸ್ ಹೋದಾಗ ತಾಜಿಲ್ ಮುಬೀನ್ ಅವರು ನನ್ನ ಹತ್ತಿರ ಬಂದು ಈ ಬಗ್ಗೆ ತಿಳಿಸಿದಾಗ ನಾನು ಈ ಪ್ರಕರಣವನ್ನು ವಾಪಾಸು ತೆಗೆದುಕೊಳ್ಳುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ನೋಟಿಸ್ ಹೋದಾಗ ತಾಜಿಲ್ ಮುಬೀನ್ ಅವರು ನನಗೆ ಹೇಳಿದ್ದರೂ ಸಹಾ ನಾನು ಸದರಿ ಪ್ರಕರಣವನ್ನು ವಾಪಾಸು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯವರಿಗೆ ತಮ್ಮ ವಿದ್ಯಾಭ್ಯಾಸದ ಪ್ರಕಾರ ಇಂಗ್ಲೀಷ್ ನಲ್ಲಿ ಸಹಿ ಹಾಕಲು ಮಾತ್ರ ಬರುತ್ತದೆ, ಅದನ್ನು ಹೊರತುಪಡಿಸಿ ಬೇರೆ ಏನೂ ಬರೆಯಲು ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಪಿ.1 ರಲ್ಲಿ ಬರೆದಿರುವ ಎಲ್ಲಾ ಬರವಣಿಗೆ ಇಂಗ್ಲೀಷ್ ಭಾಷೆಯಲ್ಲಿದೆ ಎಂದರೆ ಸರಿ. ನಿಪಿ.1 ರಲ್ಲಿ ಬರೆದಿರುವ ಬರವಣಿಗೆಯನ್ನು ಆರೋಪಿಯವರು

ಬರೆದುಕೊಂಡು ಬಂದು ಸಹಿ ಹಾಕಿ ನನಗೆ ನೀಡಿರುತ್ತಾರೆ. ನಿಪಿ.1 ರಲ್ಲಿರುವ ಸಹಿ ಹಾಗೂ ಬರವಣಿಗೆಯ ಇಂಕಿನಲ್ಲಿ ಹಾಗೂ ಬರವಣಿಗೆಯಲ್ಲಿ ಕೂಡಾ ವ್ಯತ್ಯಾಸ ಇದೆ ಎಂದರೆ ಸರಿ. ನಿಪಿ.1 ರಲ್ಲಿರುವ ಬರವಣಿಗೆಗೂ ಹಾಗೂ ಸಹಿಗೂ ಸುಮಾರು 10 ವರ್ಷಗಳ ವ್ಯತ್ಯಾಸ ಇರುತ್ತದೆ ಹಾಗೂ ಸಹಿಯಲ್ಲಿರುವ ಇಂಕ್ ಕೂಡಾ ಫೇಡ್ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ನಾನು ತಾಜಿಲ್ ಮುಬೀನ್ ಅವರ ಮನೆಯಿಂದ ತೆಗೆದುಕೊಂಡು ದುರುದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಚೆಕ್ಕನ್ನು ನಾನು 15/09/2021 ರಂದು ಬ್ಯಾಂಕಿನ ಮುಂದೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ಬ್ಯಾಂಕಿನಿಂದ ನನಗೆ ಯಾವ ದಿನಾಂಕದಂದು ಹಿಂಬರಹ ಸಿಕ್ಕಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿದೆ ಎಂದರೆ ಸುಮಾರು ದಿನಗಳಾಗಿದ್ದರಿಂದ ನನಗೆ ಈಗ ನೆನಪಿಲ್ಲ.

2021 ರಲ್ಲಿ ಆರ್ ಬಿಐ ಗೈಡ್ ಲೈನ್ಸ್ ಪ್ರಕಾರ ಹಲವಾರು ಬ್ಯಾಂಕ್ ಗಳು ಮರ್ಜ್ ಆಗಿರುತ್ತವೆ ಎಂಬ ಬಗ್ಗೆ ನನಗೆ ಮಾಹಿತಿ ಇದೆಯೇ ಎಂದರೆ ಹೌದು. ಈ ರೀತಿ ಬ್ಯಾಂಕುಗಳನ್ನು ಮರ್ಜ್ ಮಾಡಬೇಕು ಎಂಬ ಬಗ್ಗೆ ಅನೌನ್ಸ್ ಮೆಂಟ್ 2019 ನೇ ಇಸವಿಯಿಂದ ಹಲವು ಕಡೆ ಸೋಶಿಯಲ್ ಮೀಡಿಯಾ ನಲ್ಲಿ ಸಹಾ ಆಗಿತ್ತು ಎಂದರೆ ಸರಿ. ಈ ರೀತಿ ಬ್ಯಾಂಕುಗಳು ಮರ್ಜ್ ಆದನಂತರ ವ್ಯವಹಾರಗಳು ವ್ಯಾಲೀಡ್ ಆಗುವುದಿಲ್ಲ ಎಂಬ ಬಗ್ಗೆ ಸಮಾಚಾರ ಹಾಗೂ ಸೋಶಿಯಲ್ ಮೀಡಿಯಾ ನಲ್ಲಿ ಬಂದಿರುತ್ತವೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಹಾಗೂ ಬ್ಯಾಂಕುಗಳು ಮರ್ಜ್ ಆಗಿರುವ ಬಗ್ಗೆ ಸಹಾ ನನಗೆ ಗೊತ್ತಿಲ್ಲ. ನಾನು ಪಿಯುಸಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ, ನಾನು ಕಲಾ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ.

ಬ್ಯಾಂಕಿನಿಂದ ಎಂಡಾರ್ಸ್‌ಮೆಂಟ್ ಬಂದಾಗ ನಾನು ಅದನ್ನು ಓದಿಕೊಂಡಿರುತ್ತೇನೆ ಎಂದರೆ ಅದನ್ನು ನೋಡಿ ನಮ್ಮ ವಕೀಲರಿಗೆ ನೀಡಿರುತ್ತೇನೆ. ಈ ರೀತಿ ದಾಖಲಾತಿಗಳು ಬಂದಾಗ ನಾನು ನೋಡದೇ ವಕೀಲರಿಗೆ ನೀಡುತ್ತೇನೆ ಎಂದರೆ ಕೆಲವು ದಾಖಲಾತಿಗಳನ್ನು ನೋಡಿ, ಓದಿ ತಿಳಿದುಕೊಳ್ಳುತ್ತೇನೆ, ಕೆಲವನ್ನು ನೋಡಿ ವಕೀಲರಿಗೆ ನೀಡಿರುತ್ತೇನೆ. ಈ ಬಗ್ಗೆ ನಾನು ನೋಡಿ, ಅವರಿಗೆ ಮಾಹಿತಿಯನ್ನು ತಿಳಿಸಿರುತ್ತೇನೆ. ನಾನು ಹಲವಾರು ಚೆಕ್ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾಖಲು ಮಾಡಿದ್ದರಿಂದ ಬ್ಯಾಂಕಿನಿಂದ ಬಂದಿರುವ ಹಿಂಬರಹಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನೋಟಿಸನ್ನು ಆರೋಪಿಯವರಿಗೆ ಕೊಟ್ಟಿರುವ ಬಗ್ಗೆ ನಮ್ಮ ವಕೀಲರು ನನಗೆ ಮಾಹಿತಿಯನ್ನು ನೀಡಿರುತ್ತಾರೆ.

ನಿಪಿ.4 ರ ಲೀಗಲ್ ನೋಟಿಸ್ ನಲ್ಲಿ ನಮ್ಮ ವಕೀಲರು ಏನು ಮಾಹಿತಿಯನ್ನು ತಿಳಿಸಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿರುತ್ತದೆ. ನಿಪಿ.3 , ಬ್ಯಾಂಕಿನ ಎಂಡಾರ್ಸ್ ಮೆಂಟ್ ಬಗ್ಗೆ ನಮ್ಮ ವಕೀಲರು ನನಗೆ ಮಾಹಿತಿಯನ್ನು ತಿಳಿಸಿರುತ್ತಾರೆ ಎಂದರೆ ಸುಮಾರು ವರ್ಷವಾಗಿದ್ದರಿಂದ ಸಾಧಾರಣ ಮಟ್ಟಕ್ಕೆ ಅದರ ಬಗ್ಗೆ ನಮ್ಮ ವಕೀಲರು ನಿಪಿ.3 ರ ಬಗ್ಗೆ ನನಗೆ ಮಾಹಿತಿಯನ್ನು ತಿಳಿಸಿರುತ್ತಾರೆ.

ನಿಪಿ.3 ರ ಬ್ಯಾಂಕ್ ಎಂಡಾರ್ಸ್ ಮೆಂಟ್ ನಲ್ಲಿ ಸಿಂಡಿಕೇಟ್ ಬ್ಯಾಂಕ್ ಚೆಕ್ ವರ್ ವ್ಯಾಲೀಡ್ ಟಿಲ್ 30/06/2021. 01/07/2021 ಆನ್ ವರ್ಡ್ಸ್ ಸಿಂಡಿಕೇಟ್ ಬ್ಯಾಂಕ್ ಚೆಕ್ ವರ್ ನಾಟ್ ವ್ಯಾಲೀಡ್ ಆ ಕಾರಣದಿಂದ ಚೆಕ್ ಬೌನ್ಸ್ ಆಗಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಹೌದು. ಈ ರೀತಿ ಆರೋಪಿಯವರು ನನಗೆ ಮೋಸ ಮಾಡುವ ಉದ್ದೇಶದಿಂದ ಚೆಕ್ಕನ್ನು ನನಗೆ ನೀಡಿರುತ್ತಾರೆ. ಸದರಿ ಎಂಡಾರ್ಸ್ ಮೆಂಟ್ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿ. ಈ ರೀತಿ ಬ್ಯಾಂಕಿನಿಂದ ಎಂಡಾರ್ಸ್ ಮೆಂಟ್ ಬಂದಿರುವ ಬಗ್ಗೆ ನಾನು ಆರೋಪಿಯವರಿಗೆ ತಿಳಿಸಿರುವ ಬಗ್ಗೆ

ನನ್ನ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ನಮೂದಿಸಿರುತ್ತೇನೆಯೇ ಎಂದರೆ ಇಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರಮಾಣ ಪತ್ರದಲ್ಲಿ ಸಹಾ ಬ್ಯಾಂಕಿನಿಂದ ಬಂದಿರುವ ಎಂಡಾರ್ಸ್ ಮೆಂಟ್ ಬಗ್ಗೆ ಆರೋಪಿಗೆ ತಿಳಿಸಿರುತ್ತೇನೆ ಎಂಬ ಬಗ್ಗೆ ನಮೂದಿಸಿದ್ದರೂ ಕೂಡಾ ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಈ ರೀತಿ ಎಂಡಾರ್ಸ್ ಮೆಂಟ್ ಬಂದ ನಂತರ ನಾನು ಆರೋಪಿಯವರಿಗೆ ತಿಳಿಸಿರುತ್ತೇನೆ ಎಂಬ ಬಗ್ಗೆ ನಮೂದಾಗಿರುತ್ತದೆ, ಅದು ಹೇಗೆ ತಿಳಿಸಿರುತ್ತೇನೆ ಎಂದರೆ ಅದರಲ್ಲಿ ನಮೂದಾಗಿರುವ ಅಂಶಗಳ ಬಗ್ಗೆ ನನಗೆ ಸಂಪೂರ್ಣವಾಗಿ ಗೊತ್ತಿಲ್ಲ.

ಸಿಂಡಿಕೇಟ್ ಬ್ಯಾಂಕ್ ಕೆನರಾ ಬ್ಯಾಂಕಿಗೆ ಮರ್ಜ್ ಆಗುತ್ತಿರುವ ಬಗ್ಗೆ 2019 ರಿಂದ ಸಮಾಚಾರಗಳಲ್ಲಿ ಪ್ರಕಟವಾಗಿರುತ್ತದೆ ಎಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಎಂಡಾರ್ಸ್ ಮೆಂಟ್ ನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿದ್ದರೂ ಸಹಾ ಹಾಗೂ ಬ್ಯಾಂಕುಗಳು ಮರ್ಜ್ ಆಗಿರುವ ಬಗ್ಗೆ ಸಮಾಚಾರ ಮೀಡಿಯಾಗಳಲ್ಲಿ ಬಂದಿದ್ದರೂ ಸಹಾ, ಆರೋಪಿಯ ಜೊತೆ ಯಾವುದೇ ವ್ಯವಹಾರ ಇಲ್ಲದೇ ಇದ್ದರೂ ಸಹಾ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕಿನ ಮೇಲೆ ರೂ.4,00,000/-ಗಳನ್ನು ನಮೂದಿಸಿಕೊಂಡು ಅದನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾಖಲಿಸಿರುವ ದೂರಿನಲ್ಲಿರುವ ಸಹಿ ಹಾಗೂ ಮುಖ್ಯ ವಿಚಾರಣೆಯಲ್ಲಿರುವ ಸಹಿ ನನ್ನದಾಗಿರುತ್ತದೆ.

ಈ ಪ್ರಕರಣದಲ್ಲಿರುವ ಆರೋಪಿ ಹಾಗೂ ನನಗೂ ಯಾವುದೇ ಸಂಬಂಧವಿಲ್ಲ, ತಾಜಿಲ್ ಮುಬೀನ್ ಅವರ ಮನೆಯಿಂದ ಚೆಕ್ಕನ್ನು ತೆಗೆದುಕೊಂಡು, ಸದರಿ ಚೆಕ್

ವ್ಯಾಲೀಡ್ ಇರುವುದಿಲ್ಲ ಎಂದು ನನಗೆ ಗೊತ್ತಿದ್ದರೂ ಸಹಾ ಅದರಲ್ಲಿ ಬರವಣಿಗೆಗಳನ್ನು ಮಾಡಿ, ಉದ್ದೇಶಪೂರ್ವಕವಾಗಿ ಬ್ಯಾಂಕಿಗೆ ಹಾಜರುಪಡಿಸಿ ಆರೋಪಿಯಿಂದ ಲಾಭವನ್ನು ಪಡೆದುಕೊಳ್ಳುವ ಉದ್ದೇಶದಿಂದ ಸದರಿ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಕರ್ನಾಟಕ ಬ್ಯಾಂಕಿನಲ್ಲಿ ಅಕೌಂಟ್ ಇರುತ್ತದೆ. ಆರೋಪಿಗೆ ಹಣವನ್ನು ಕೊಡುವ ಸಮಯದಲ್ಲಿ ನಾನು ಅವರಿಂದ ಚೆಕ್ಕನ್ನು ಪಡೆದುಕೊಂಡಿರುವುದಿಲ್ಲ, ಸದರಿ ಹಣವನ್ನು ನಾನು ಅವರಿಂದ ಪದೇ ಪದೇ ವಾಪಾಸು ಕೇಳಿದಾಗ ಸುಮಾರು 5-6 ತಿಂಗಳುಗಳ ನಂತರ ಸದರಿ ಚೆಕ್ಕನ್ನು ನನಗೆ ಅವರು ನೀಡಿರುತ್ತಾರೆ. ನನ್ನ ಪ್ರಮಾಣಪತ್ರದಲ್ಲಿ ಹಣವನ್ನು ನಾನು ಆರೋಪಿಗೆ ಜನವರಿ, 2021 ರ ಕೊನೆಯ ವಾರದಲ್ಲಿ ನೀಡಿರುವ ಬಗ್ಗೆ ನಮೂದಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ಪ್ರಮಾಣಪತ್ರದಲ್ಲಿ ಸದರಿ ಹಣವನ್ನು ಆರೋಪಿಯವರು ಜುಲೈ, 2021 ರ ಕೊನೆಯಲ್ಲಿ ಕೊಡುತ್ತಾರೆ ಎಂಬ ಬಗ್ಗೆ ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ಚೆಕ್ಕನ್ನು ಅವರು ಸುಮಾರು 8-9 ತಿಂಗಳುಗಳ ನಂತರ ಸೆಪ್ಟೆಂಬರ್ ತಿಂಗಳಲ್ಲಿ ನನಗೆ ನೀಡಿರುತ್ತಾರೆ. ಆ ಸಮಯದಲ್ಲಿ ನಾನು ತಾಜೀಲ್ ಮುಬೀನ್ ಅವರ ಮನೆಗೆ ಹೋಗಿ ಸದರಿ ಚೆಕ್ಕನ್ನು ತೆಗೆದುಕೊಂಡು ಸುಳ್ಳು ಕಥೆಯನ್ನು ಕಟ್ಟಿಕೊಂಡು ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕೆಲವು ಬ್ಯಾಂಕುಗಳು ಮರ್ಜ್ ಆಗಿರುವ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಕೆಲವು ಬ್ಯಾಂಕುಗಳು ಮರ್ಜ್ ಆಗಿರುವ ಬಗ್ಗೆ ನನಗೆ ಗೊತ್ತಿತ್ತು, ಎಲ್ಲಾ ಬ್ಯಾಂಕುಗಳ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಚೆಕ್ಕು ವ್ಯಾಲೀಡ್ ಇರುವುದಿಲ್ಲ ಎಂಬ ಬಗ್ಗೆ ನನಗೆ ಗೊತ್ತಿದ್ದರೂ ಸಹಾ ನಾನು ಈ ಹಿಂದೆ ದಾಖಲಿಸಿರುವ ಚೆಕ್ ಪ್ರಕರಣಗಳ ಹಾಗೇ ಇದೂ ಕೂಡಾ ರಾಜೀ ಆಗಬಹುದು ಎಂಬ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ಆರೋಪಿಯ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಜೂನ್ ,2021 ರ ನಂತರ ಆರೋಪಿಯ ಮನೆಗೆ ಸದರಿ ಹಣವನ್ನು ಕೇಳಲು ಹೋಗಿರುತ್ತೇನೆ.ನಾನು ಆರೋಪಿಯ ಮನೆಗೆ ಹೋಗಿರುವುದಿಲ್ಲ, ಸದರಿ ಚೆಕ್ಕನ್ನು ನಾನು ತಾಜಿಲ್ ಮುಬೀನ್ ಅವರ ಮನೆಯಲ್ಲಿ ಪಡೆದುಕೊಂಡಿದ್ದು, ಆರೋಪಿಯ ಮನೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ದಾಖಲು ಮಾಡುವ ಸಮಯದಲ್ಲಿ ನಾನು ದೂರಿನಲ್ಲಿ ನಮೂದಿಸಿರುವ ವಿಳಾಸದಲ್ಲಿ ಆರೋಪಿ ವಾಸವಿರಲಿಲ್ಲ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಸದರಿ ವಿಳಾಸವನ್ನು ನಾನು ಊಹೆಯ ಮೇರೆಗೆ ಬರೆದುಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ.

ಮೋಸ ಮಾಡುವ ಉದ್ದೇಶದಿಂದ ನಾನು ಈ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ, ಆರೋಪಿ ಹಾಗೂ ನನ್ನ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹಾ ಹಾಗೂ ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ನಮೂದಿಸಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಸಹಾ ಮಾನ್ಯ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಪ್ರಾರಂಭದಲ್ಲಿ ವಾರ್ಷಿಕವಾಗಿ ಒಂದೂವರೆ ಲಕ್ಷ ಆದಾಯ ಬರುತ್ತಿದ್ದು ನಂತರದಲ್ಲಿ ಏರಿಕೆಯಾಗಿ ಈಗ 5-6 ಲಕ್ಷ ವಾರ್ಷಿಕ ಆದಾಯ ಬರುತ್ತದೆ. ನಮ್ಮ ಮನೆಯಲ್ಲಿ ಒಟ್ಟು ನಾಲ್ಕು ಜನ ಇದ್ದೇವೆ. ನಮ್ಮ ಮನೆಯಲ್ಲಿ ನಾನು, ನನ್ನ ಹೆಂಡತಿ ಹಾಗೂ ತಾಯಿ ವಾಸವಿದ್ದೇವೆ, ನನ್ನ ಮಗ ಬೇರೆ ಕಡೆ ಹೋಗಿ ಓದುತ್ತಿದ್ದಾನೆ. ಈಗ ನನ್ನ ತಾಯಿಗೆ 76 ವರ್ಷ ಆಗಿರುತ್ತದೆ. ಅವರಿಗೆ ಬಿಪಿ ಖಾಯಿಲೆ ಇರುತ್ತದೆ. ಅವರ ಔಷಧಿಗೆ ಹಾಗು ಚಿಕಿತ್ಸೆಗೆ ತಿಂಗಳಿಗೆ ಎಷ್ಟು ಖರ್ಚಾಗಬಹುದು ಎಂದರೆ ಅವರ ಹೆಸರಿನಲ್ಲಿ ಎಫ್ ಡಿ ಇರುತ್ತದೆ, ಅವರ ಖರ್ಚು ಅವರೇ ನೋಡಿಕೊಳ್ಳುತ್ತಾರೆ.

ನನ್ನ ಮಗ ಎಂಜಿನಿಯರಿಂಗ್ ಓದುತ್ತಿದ್ದಾನೆ ಅವನಿಗೆ ವಾರ್ಷಿಕವಾಗಿ ವಿದ್ಯಾಭ್ಯಾಸ, ಹಾಸ್ಟೆಲ್ ಫೀಸ್ ಹಾಗೂ ಇತರ ಖರ್ಚುಗಳನ್ನು ಸೇರಿ ರೂ.1,20,000/- ಗಳು ಆಗುತ್ತದೆ. ನನ್ನ ಸ್ವಂತ ಮನೆ ಇರುವುದರಿಂದ ತಿಂಗಳಿಗೆ ನನಗೆ ಐದರಿಂದ ಹತ್ತು ಸಾವಿರ ರೂಪಾಯಿಗಳು ಖರ್ಚು ಆಗುತ್ತದೆ. ಎಲ್ಲಾ ಖರ್ಚುಗಳನ್ನು ಸೇರಿಸಿ ವರ್ಷಕ್ಕೆ ನನಗೆ 3 ರಿಂದ 4 ಲಕ್ಷ ರೂಪಾಯಿಗಳ ಖರ್ಚು ಇರುತ್ತದೆ ಎಂದರೆ ಸರಿ.ನನಗೆ ವಾರ್ಷಿಕವಾಗಿ ಐದು ಲಕ್ಷ ರೂಪಾಯಿಗಳ ಆದಾಯ ಇರುವುದರಿಂದ ಆರೋಪಿಗೆ ನಾಲ್ಕು ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಡಲು ನನಗೆ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

ಹತ್ತು ವರ್ಷಗಳಲ್ಲಿ ನನ್ನ ವಿರುದ್ಧ ಯಾವುದಾದರೂ ಸ್ಟೈಕ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಜನರಿಗೆ ಸಾಲವನ್ನು ಕೊಟ್ಟು ಅತೀ ಹೆಚ್ಚು ಬಡ್ಡಿ ಪಡೆದುಕೊಂಡು ಅವರ ಸಾವಿಗೆ ಕಾರಣನಾಗಿರುತ್ತೇನೆ ಎಂದು ನನ್ನ ವಿರುದ್ಧ ಸ್ಟ್ರೈಕ್ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಹಾಗೂ ಅವರಿಂದ ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ಅವರ ವಿರುದ್ಧ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

: ಮರು ವಿಚಾರಣೆ ಇಲ್ಲ:

(ದಿನಾಂಕ:02/12/2024 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸ.ಇ. ಓ.

ಸಹಿ/-
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ: ಕೊಪ್ಪ.

ಸಾಕ್ಷಿಯ ಸಹಿ: